ಸ್ಥಾಪಿತ ವ್ಯವಸ್ಥೆಯ ವಿರುದ್ಧದ ತನ್ನ ಭಾವನೆಗಳನ್ನು ಅಭಿವ್ಯಕ್ತಿಗೊಳಿಸಿದವನು. 'ನಮ್ಮ ನಾಡೇ ನಮ್ಮ ವಿಶ್ವ, ಸ್ವಾತಂತ್ರ್ಯವೇ ನಮ್ಮ ಕಾನೂನು' ಅನ್ನುತ್ತಾ ಜನ ಸಾಮಾನ್ಯರ ಎದೆಯಿಂದ ಚಿಮ್ಮುವ ಕ್ರಾಂತಿಯ ಬುಗ್ಗೆಯಂತೆ ಬದುಕಿದವನು, ಅಂತೆಯೇ ಬರೆದವನು.

2013ರಲ್ಲಿ ತನ್ನ ಸಂಗಾತಿ ಫ್ರ್ಯಾಂಕ್ ರೇಮ್ ತೀರಿಕೊಂಡ ಅನಂತರ ಫೋ ತಾನು ಮಾಡಬೇಕಾದ ಕೆಲಸವನ್ನು ಆದಷ್ಟೂ ಬೇಗ ಮುಗಿಸಿ, ಇಲ್ಲಿಂದ ತೆರಳುವ ಅವಸರದಲ್ಲಿದ್ದ ಅಂತ ಅವನ ಸಾವಿನ ಸಂದರ್ಭದಲ್ಲಿ ಮಾತನಾಡಿಕೊಳ್ಳುವಷ್ಟು ತೀವ್ರವಾಗಿ ತನ್ನನ್ನು ತಾನು ಸಾರ್ವಜನಿಕ ಬದುಕಿಗೆ ತೆತ್ತುಕೊಂಡಿದ್ದ. 2016ರಲ್ಲಿ ತನ್ನ 90ನೆಯ ವಯಸ್ಸಿನಲ್ಲಿ ಫೋನ ಸಾವಿನೊಂದಿಗೆ ಒಬ್ಬ ಅಪ್ರತಿಮ ಪ್ರತಿಭಾವಂತ, ಬೆರಗುಗೊಳಿಸುವ ಸೃಜನಶೀಲತೆಯ, ವಿಡಂಬನೆ ಹಾಗೂ ವಿನೋದಗಳನ್ನು ಅಪಾರ ಮಾನವೀಯತೆಯೊಂದಿಗೆ ಬೆಸೆದ ಮಹಾ ಮಾನವತಾವಾದಿ ಮನಸ್ಸೊಂದು ಕಣ್ಮರೆಯಾಗಿತ್ತು.

ಫೋನ ಕೆಲವು ಮುಖ್ಯ ಕೃತಿಗಳು: 'ಆಕ್ಸಿಡೆಂಟಲ್ ಡೆಥ್ ಆಫ್ ಆನ್ ಅನಾರ್ಕಿಸ್ಟ್' (ಅರಾಜಕತಾವಾದಿಯೊಬ್ಬನ ಆಕಸ್ಮಿಕ ಸಾವು), 'ವೋಂಟ್ ಪೆ, ಕಾಂಟ್ ಪೆ' (ಕೊಡಲ್ಲ, ಕೊಡೋಕ್ಕಾಗಲ್ಲ), 'ದ ವರ್ಚ್ಯುಯಸ್ ಬರ್ಗ್ಲರ್' (ಸದ್ಗುಣಶೀಲ ದರೋಡೆಕೋರ), 'ಟ್ರಂಪೆಟ್ಸ್ ಅಂಡ್ ರ್‍ಯಾಸ್ಬರೀಸ್' (ತುತ್ತೂರಿಗಳು ಮತ್ತು ರ್‍ಯಾಸ್ಬರಿಗಳು), 'ದ ಪೋಪ್ ಅಂಡ್ ದ ವಿಚ್' (ಪೋಪ್ ಮತ್ತು ಮಾಟಗಾತಿ), 'ಎಲಿಜಬೆತ್: ಆಲ್‌ಮೋಸ್ಟ್ ಬೈ ಚಾನ್ಸ್ ಅ ವುಮೆನ್' (ಎಲಿಜಬೆತ್: ಆಕಸ್ಮಿಕವಾಗಿ ಹೆಣ್ಣಾದವಳು), 'ದ ಪೆಸೆಂಟ್ಸ್ ಬೈಬಲ್ ಅಂಡ್ ದ ಸ್ಟೋರಿ ಆಫ್ ದ ಟೈಗರ್' (ರೈತರ ಬೈಬಲ್ ಮತ್ತು ಹುಲಿಯೊಂದರ ಕಥೆ), 'ಜೊಹಾನ್ ಪಡಾನ್ ಅಂಡ್ ದ ಡಿಸ್ಕವರಿ ಆಫ್ ದ ಅಮೆರಿಕಾಸ್', 'ಮಿಸ್ಟೆರೋ ಬಫೋ' ಮುಂತಾದವುಗಳು.

★★★

ಆತ್ಮಕತೆ ಅನ್ನುವುದು ವ್ಯಕ್ತಿಯೊಬ್ಬನ ಬದುಕಿನಲ್ಲಿ ಘಟಿಸಿದ ಅಥವಾ ವ್ಯಕ್ತಿಯೊಬ್ಬ ನಡೆದು ಬಂದ ದಾರಿಯ ಹಿನ್ನೋಟವಲ್ಲ. ಸ್ವರತಿಯ ಅಥವಾ ವೈಭವೀಕೃತ ಬದುಕಿನ ನಿರೂಪಣೆಯೂ ಅಲ್ಲ. ಖಾಸಗೀ ಬದುಕಿನ ಸುತ್ತಲೇ ಗಿರಕಿ ಹೊಡೆಯುತ್ತಾ ಸಾಮಾಜಿಕ ಬದ್ಧತೆಯ ಕೊರತೆಯಿಂದ ಸಾಗುವ ಆತ್ಮಕತೆಗಳಿಂದ ಓದುಗ ಪಡೆದುಕೊಳ್ಳುವಂಥದ್ದೇನೂ ಇರುವುದಿಲ್ಲ. ನಿಜವಾದ ಆತ್ಮಕತೆಗಳು ಈ ಮಿತಿಗಳನ್ನು ಮೀರಿರುತ್ತವೆ. ಜೊತೆಗೆ ಸೃಜನಶೀಲತೆಯ ಹೊಳಪನ್ನು ದಕ್ಕಿಸಿಕೊಂಡು ಸಾಮಾಜಿಕ ಪಥ್ಯದಂತೆ ಕೆಲಸ ಮಾಡುತ್ತವೆ. ಅವುಗಳೊಳಗಿನ ಹೊಕ್ಕಾಟ ಓದುಗರ ವ್ಯಕ್ತಿತ್ವವನ್ನು ಹಾಗೂ ಸಂವೇದನೆಯನ್ನು ರೂಪಿಸಿಕೊಳ್ಳಲು ಸಹಕಾರಿಯಾಗುತ್ತವೆ. ಅದು ಆತ್ಮಕತೆಯೊಳಗಿನ ನಿರೂಪಕನ ಸಾಮಾಜಿಕ ಬದ್ಧತೆ, ಮನುಕುಲದ ಬಗೆಗಿನ ಪ್ರೀತಿಯನ್ನು ಅವಲಂಬಿಸಿರುತ್ತದೆ. ಈ ಕಾರಣಕ್ಕೇ ಲೋಕ ಸಾಹಿತ್ಯದಲ್ಲಿ ಗಾಂಧಿಯ 'ಮೈ ಎಕ್ಸ್‌ಪೆರಿಮೆಂಟ್ ವಿಥ್ ಟ್ರುಥ್', ನೆರೂಡನ 'ಮೆಮೋರ್ಸ್', ಮಾರ್ಕ್ವೆಜ್‌ನ 'ಲಿವಿಂಗ್ ಟು ಟೆಲ್ ದ ಟೇಲ್', ಚೆಗುವಾರನ 'ಮೋಟಾರ್ ಸೈಕಲ್ ಡೈರೀಸ್', ಕುರೊಸೋವಾನ 'ಸಂಥಿಂಗ್ ಲೈಕ್ ಆನ್ ಆಟೋಬಯೋಗ್ರಫಿ,' ಸಿಂಗರನ 'ಇನ್ ಮೈ ಫಾದರ್ಸ್ ಕೋರ್ಟ್', ಮುಂತಾದವುಗಳು. ಅದೇರೀತಿ ಕನ್ನಡದಲ್ಲಿ ಕುವೆಂಪು ಆತ್ಮಕತೆ 'ನೆನಪಿನ ದೋಣಿಯಲ್ಲಿ', ಕಾರಂತರ 'ಹುಚ್ಚು ಮನಸ್ಸಿನ ಹತ್ತು ಮುಖಗಳು', ಲಂಕೇಶರ 'ಹುಳಿ ಮಾವಿನ ಮರ', ಅನಂತಮೂರ್ತಿಯವರ 'ಸುರಗಿ', ಕಾರ್ನಾಡರ 'ಆಡಾಡತಾ ಆಯುಷ್ಯ', ಅನುಪಮಾ ನಿರಂಜನರ 'ಸಿಹಿ ಕಹಿ', ತೇಜಸ್ವಿಯವರ 'ಅಣ್ಣನ ನೆನಪು' (ತೇಜಸ್ವಿ ಇದನ್ನು ಆತ್ಮಕತೆ ಎಂದು ಕರೆಯದಿದ್ದರೂ), ಕಡಿದಾಳು ಶಾಮಣ್ಣನವರ 'ಕಾಡ ತೊರೆಯ ಜಾಡು', ಸಿದ್ಧಲಿಂಗಯ್ಯನವರ 'ಊರು ಕೇರಿ'ಯಂತಹವು ಈ ಹಿನ್ನೆಲೆಯಲ್ಲಿ ಓದಿಸಿಕೊಳ್ಳುತ್ತವೆ.

ಬಾಲ್ಯಕಾಲದ ಮನೆಯ ಹಾಗೂ ಹೊರಗಿನ ಪರಿಸರ, ತಾನು ಹುಟ್ಟಿದ ಜಾಗ, ಒಡನಾಡಿದ ಜನ,